# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 25.07.2018 ರಂದು ಪೂರ್ವಾಹ್ನ ಗಂಟೆ 10:30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು:

| | |
|---|---|
| 1. **ಡಾ. ಕಿಶೋರ್ ಕುಮಾರ್ ಸಿ. ಕೆ.**<br>ಕುಲಪತಿಗಳು (ಪ್ರಭಾರ)<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | **ಅಧ್ಯಕ್ಷರು** |
| 2. **ಶ್ರೀ ಮಹೇಶ್ ರಾವ್.**<br>ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. **ಡಾ. ಈಶ್ವರ ಪಿ.**<br>ಡೀನರು, ವಾಣಿಜ್ಯ ನಿಕಾಯ<br>ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |
| 4. **ಶ್ರೀ ಅಶೋಕ್ ಕುಮಾರ್ ರೈ,**<br>"ಅನುರಾಗ್", ಡಿ. ನಂ.–2–30–2484/1<br>ಕಾಸ್ಮಸ್ ಲೇನ್, ಕದ್ರಿ ಕಂಬ್ಳ, **ಮಂಗಳೂರು** | – " – |
| 5. **ಪ್ರೊ. ಬಿ. ರಹಮತ್ ಅಲಿ**<br>ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು<br>ಕಂದಕ, **ಮಂಗಳೂರು – 575 001** | – " – |
| 6. **ಪ್ರೊ. ಗಣಪತಿ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,<br>**ಪೂಂಜಾಲಕಟ್ಟೆ – 574 233** | – " – |
| 7. **ಡಾ. ಯು. ತಾರಾ ರಾವ್,**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,<br>ಕಾವೂರು **ಮಂಗಳೂರು – 575 015.** | – " – |
| 8. **ಶ್ರೀ ನಿತ್ಯಾನಂದ ಕೆ.,**<br>ಪ್ರಾಂಶುಪಾಲರು, ಎಸ್.ಡಿ.ಎಂ. ಕಾಲೇಜ್ ಆಫ್ ಎಜುಕೇಶನ್,<br>**ಉಜಿರೆ – 574 240.** | – " – |
| 9. **ಶ್ರೀ ಟಿ. ನಾರಾಯಣ ಗೌಡ**<br>ಪ್ರಾಂಶುಪಾಲರು<br>ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ<br>**ದಕ್ಷಿಣ ಕನ್ನಡ, ಮಂಗಳೂರು** 575001.<br>(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ) | – " – |
| 10. **ಪ್ರೊ. ಎ. ಎಂ. ಖಾನ್**<br>ಕುಲಸಚಿವರು (ಪರೀಕ್ಷಾಂಗ)<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |
| 11. **ಪ್ರೊ. ಬಿ. ಎಸ್. ನಾಗೇಂದ್ರ ಪ್ರಕಾಶ್**<br>ಕುಲಸಚಿವರು (ಆಡಳಿತ)<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |

**ವಿಶೇಷ ಆಹ್ವಾನಿತರು:**

12. **ಡಾ. ದಯಾನಂದ ನಾಯ್ಕ್** — " —
ಹಣಕಾಸಿನ ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು** **ಸದಸ್ಯರು**
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

2. **ಶ್ರೀ ಹರೀಶ್ ಆಚಾರ್,** — " —
ಬಿನ್ ರಾಘವ ಆಚಾರ್,
"ರಕ್ಷಾ", ವಿ.ಎಸ್.ಎಸ್. ಬ್ಯಾಂಕಿನ ಹತ್ತಿರ,
ನಾಗುರಿ, ಕಂಕನಾಡಿ –575 002, **ಮಂಗಳೂರು.**

3. **ವೈದ್ಯಕೀಯ ಶಿಕ್ಷಣ ನಿರ್ದೇಶಕರು** — " —
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

4. **ನಿರ್ದೇಶಕರು**
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ, — " —
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

*********

<u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 25.07.2018 ರಂದು ಪೂರ್ವಾಹ್ನ ಗಂಟೆ 10:30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಪ್ರಾರಂಭಿಕ</u>

1. ಮಾನ್ಯ ಕುಲಸಚಿವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 16(2)ರ ಪ್ರಕಾರ ಘನತೆವೆತ್ತ ಕುಲಾಧಿಪತಿಯವರಿಂದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರಭಾರ ಕುಲಪತಿಗಳಾಗಿ ನೇಮಕಗೊಂಡು ದಿನಾಂಕ 05.06.2018 ರಂದು ಮಂಗಳೂರು ವಿಶ್ವವಿದ್ಯಾನಿಲಯದ ನೂತನ ಪ್ರಭಾರ ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದ ಡಾ.ಕಿಶೋರ್ ಕುಮಾರ್ ಸಿ.ಕೆ., ಡೀನರು, ಶಿಕ್ಷಣ ನಿಕಾಯ, ಸ್ನಾತಕೋತ್ತರ ದೈಹಿಕ ಶಿಕ್ಷಣ ಮತ್ತು ಕ್ರೀಡಾ ಅಧ್ಯಯನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸಭೆಗೆ ಸ್ವಾಗತಿಸಿದರು.

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ ಪ್ರಕರಣ 28(1)(ಜ)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡಿದ್ದ ಈ ಕೆಳಗಿನ ಸದಸ್ಯರುಗಳ ಸಿಂಡಿಕೇಟ್ ಸದಸ್ಯತ್ವವನ್ನು ಸರ್ಕಾರವು ಹಿಂಪಡೆದಿರುವುದರಿಂದ ಸದರಿ ಸದಸ್ಯರುಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದ್ದು ಸದಸ್ಯತ್ವದಿಂದ ಮುಕ್ತಗೊಂಡಿರುವ ಹಿನ್ನೆಲೆಯಲ್ಲಿ ಸದರಿಯವರು ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

   1. ಶ್ರೀ ವಿಕ್ಟರ್ ವಾಲ್ಟರ್ ನರೊನ್ನಾ, ಬಿನ್ ಡೊಮಿನಿಕ್ ರೊಸಾರಿಯೋ ನರೋನ್ನ, ಸೊರ್ನಾಡು ಮನೆ ಮತ್ತು ಅಂಚೆ, ಪಂಜಿಕಲ್ಲು ಗ್ರಾಮ, ಬಂಟ್ವಾಳ ತಾಲೂಕು – 574 211
   2. ಕು. ಸೌಮ್ಯ ಸಂಜೀವ, ಬಿನ್ ಸಂಜೀವ ಗುರಿಕಾರ, ಬಿಕೋ ಕಂಪನಿ ಹತ್ತಿರ, ಕೋತಲಕಟ್ಟೆ, ಉಳಿಯಾರಗೋಳಿ ಗ್ರಾಮ, ಕಾಪು ಅಂಚೆ, ಉಡುಪಿ ಜಿಲ್ಲೆ – 574 106
   3. ಡಾ. ಭಾರ್ಗವಿ ಡಿ. ಹೆಮ್ಮಿಗೆ, ನಂ. 555/ ಓ, ಇಂದ್ರಪ್ರಸ್ಥ, ನ್ಯೂ ಕಾಂತರಾಜ್ ರಸ್ತೆ, ಕುವೆಂಪು ನಗರ, ಮೈಸೂರು– 570009
   4. ಶ್ರೀ ಬಾದ್‌ಷ ಸಾಂಬಾರ್‌ತೋಟ, ಪಜೀರು ಗ್ರಾಮ, ಕುರ್ನಾಡು ಅಂಚೆ, ಬಂಟ್ವಾಳ ತಾಲೂಕು, ಮಂಗಳೂರು ಜಿಲ್ಲೆ –574 153
   5. ಶ್ರೀ ತೇಜಸ್ವಿ ರಾಜ್, ಬಿನ್ ಗಂಗಾಧರ್, ನಂ. 602, ಕ್ಲಾಸಿಕ್ ಹೈಟ್ಸ್ ಅಪಾರ್ಟ್‌ಮೆಂಟ್, ಬಿಜೈ, ಮಂಗಳೂರು – 575 005
   6. ಶ್ರೀ ಗಂಗರಾಜು ಬಿ. ಡಿ., ಬೆಟ್ಟಹಳ್ಳಿ, ದಾಸನಪುರ ಹೋಬಳಿ, ಕಡಬಗೆರೆ ಅಂಚೆ, ಬೆಂಗಳೂರು– 562130

<u>ಪ್ರಾಸ್ತಾವಿಕ</u>

1. ಡಾ.ಕಿಶೋರ್ ಕುಮಾರ್ ಸಿ.ಕೆ. ಮಾನ್ಯ ಕುಲಪತಿಗಳು (ಪ್ರಭಾರ), ಮಂಗಳೂರು ವಿಶ್ವವಿದ್ಯಾನಿಲಯ ಇವರು ಸಭೆಯಲ್ಲಿ ಮಾತನಾಡುತ್ತಾ, ನೂತನ ಪ್ರಭಾರ ಕುಲಪತಿಗಳಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನೇಮಕವಾಗಿದ್ದಕ್ಕೆ ವಂದನೆಗಳನ್ನು ಸಲ್ಲಿಸುತ್ತಾ ತಮ್ಮ ಅಧಿಕಾರಾವಧಿಯಲ್ಲಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಏಳಿಗೆಗಾಗಿ ಶ್ರಮಿಸುವುದಾಗಿ ಹಾಗೂ ಅದಕ್ಕಾಗಿ ಎಲ್ಲರ ಸಲಹೆ ಸಹಕಾರಗಳನ್ನು ಕೋರಿದರು.
2. ಇತ್ತೀಚಿನ ದಿನಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿ ಪತ್ರಿಕೆಗಳಲ್ಲಿ, ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವ ವಿಷಯಗಳ ಬಗ್ಗೆ ಮಾನ್ಯ ಕುಲಪತಿಗಳು (ಪ್ರಭಾರ) ವಿಷಾದ ವ್ಯಕ್ತಪಡಿಸಿದರು. ವಿಶ್ವವಿದ್ಯಾನಿಲಯದ ಗೌರವವನ್ನು ಕಾಪಾಡುವುದು ಎಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಇದಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಯಾರೂ ಕೆಲಸ ಮಾಡಬಾರದೆಂದು ಕೋರಿಕೊಂಡರು.

3. ಮಾನ್ಯ ಕುಲಪತಿಯವರು ಚಿಕ್ಕ ಅಳುವಾರ ಪಿ.ಜಿ.ಸೆಂಟರ್ ಬಗ್ಗೆ ಚರ್ಚಿಸುತ್ತಾ, ಪ್ರಸ್ತುತ ಪಿ.ಜಿ.ಸೆಂಟರ್ ನಲ್ಲಿ ಪ್ರಭಾರ ನಿರ್ದೇಶಕರು ಕಾರ್ಯನಿರ್ವಹಿಸುತ್ತಿದ್ದು, ವಾರದಲ್ಲಿ ಎರಡು/ಮೂರು ದಿನ ಮಾತ್ರ ಸೆಂಟರಿಗೆ ಭೇಟಿ ನೀಡುತ್ತಾರೆ ಹಾಗೂ ಅಲ್ಲಿ ಹೆಚ್ಚಿನ ವಿಭಾಗಗಳಲ್ಲಿ ಅತಿಥಿ ಉಪನ್ಯಾಸಕರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು ಆಡಳಿತವನ್ನು ಚುರುಕುಗೊಳಿಸಲು ಅಲ್ಲಿರುವ ಖಾಯಂ ಹಿರಿಯ ಶಿಕ್ಷಕರನ್ನು ವಿವಿಧ ವಿಭಾಗಗಳಿಗೆ ಸಂಯೋಜನಕರನ್ನಾಗಿ ನೇಮಿಸುವ ಬಗ್ಗೆ ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಅದಕ್ಕೆ ಎಲ್ಲಾ ಸದಸ್ಯರು ಸ್ಪಂದಿಸಿ ಈ ಬಗ್ಗೆ ಕುಲಪತಿಯವರಿಗೆ ನಿರ್ಧಾರ ಕೈಗೊಳ್ಳಲು ಅಧಿಕಾರ ನೀಡಲಾಯಿತು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 23.05.2018ರಂದು ನಡೆದ 2018ನೇ ಸಾಲಿನ ತೃತೀಯ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.
2. ದಿನಾಂಕ 04.06.2018ರಂದು ನಡೆದ 2018ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 28.04.2018 ರಂದು ನಡೆದ 2018ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**ಈ ಸಿಂಡಿಕೇಟು ಸಭೆಗೆ ಮಂಡಿಸಿದ ಕಾರ್ಯಸೂಚಿಗಳು :**

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:1(2018)

**ವಿಷಯ:** ಪದವಿ ಮಟ್ಟದ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:2(2018)

**ವಿಷಯ:** ಪದವಿ ಮಟ್ಟದ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:3(2018)

**ವಿಷಯ:** ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:4(2018)

**ವಿಷಯ:** ಪದವಿ ಮಟ್ಟದ ಇತಿಹಾಸ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:5(2018)

**ವಿಷಯ:** ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:6(2018)

**ವಿಷಯ:** ಪದವಿ ಮಟ್ಟದ ಇಂಗ್ಲೀಷ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:7(2018)

**ವಿಷಯ:** ಪದವಿ ಮಟ್ಟದ ಕನ್ನಡ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:8(2018)

**ವಿಷಯ:** ಪದವಿ ಮಟ್ಟದ ವಾಣಿಜ್ಯ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:9(2018)

**ವಿಷಯ:** ಸಂತ ಆಗ್ನೇಸ್ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಪ್ರಾರಂಭಿಸಲಿರುವ ಹೊಸ ಕೋರ್ಸುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಸಮಿತಿಯ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:10(2018)

**ವಿಷಯ:** ಶ್ರೀ ಶಾರದಾ ಮಹಿಳಾ ಕಾಲೇಜು, ಸುಳ್ಯ ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಬಿ. ಎ. ಡಿಗ್ರಿಗೆ ವಿಸ್ತರಣಾ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯು ವಿಸ್ತರಣಾ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:11(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಉಡುಪಿ ಇನ್‌ಸ್ಟಿಟ್ಯೂಟ್ ಆಫ್ ಹೋಟೇಲ್ ಆಂಡ್ ಟೂರಿಸಂ ಸಾಯನ್ಸ್, ಮಣಿಪಾಲ ಎಂಬ ವಿದ್ಯಾ ಸಂಸ್ಥೆಗೆ ಬಿ.ಎಸ್ಸಿ. (ಫುಡ್ ಟೆಕ್ನಾಲಜಿ) ಕೋರ್ಸಿಗೆ ವಿಸ್ತರಣಾ ಸಂಯೋಜನೆ ಮತ್ತು ಬಿ.ಕಾಂ. ಕೋರ್ಸಿನ ವಿದ್ಯಾರ್ಥಿ ಪರಿಮಿತಿ ಹೆಚ್ಚಳದ ಬಗ್ಗೆ.

**ನಿರ್ಣಯ:** ಪರಿಶೀಲನಾ ಸಮಿತಿಯು ವಿಸ್ತರಣಾ ಸಂಯೋಜನೆ ಮತ್ತು ವಿದ್ಯಾರ್ಥಿ ಪರಿಮಿತಿ ಹೆಚ್ಚಳದ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:12(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಬೆಸೆಂಟ್ ಮಹಿಳಾ ಕಾಲೇಜು, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ ಎಂ.ಎಸ್ಸಿ ಫುಡ್ ಸಾಯನ್ಸ್ & ನ್ಯೂಟ್ರೀಷನ್ ಕೋರ್ಸಿಗೆ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಪರಿಶೀಲನಾ ಸಮಿತಿಯು ವಿಸ್ತರಣಾ ಸಂಯೋಜನೆ ಬಗ್ಗೆ ಸಲ್ಲಿಸಿದ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:13(2018)

**ವಿಷಯ:** SHARADA COLLEGE, Mangalore, ಎಂಬ ಸಂಯೋಜಿತ ಕಾಲೇಜಿನವರು ಪ್ರಸ್ತುತ ಇರುವ ಕೊಡಿಯಾಲ್‌ಬೈಲ್, ಮಂಗಳೂರು 575003 ಎಂಬ ವಿಳಾಸವಿರುವ ಸ್ಥಳದಿಂದ ದೇವಿನಗರ ತಲಪಾಡಿ, ಮಂಗಳೂರು 575 023 ಎಂಬ ವಿಳಾಸವಿರುವ ಹೊಸ ಜಾಗದಲ್ಲಿ ಸ್ಥಳಾಂತರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ5:14(2018)

**ವಿಷಯ:** ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಅಗತ್ಯವಿದ್ದ 5 KVA UPS with Battery ಖರೀದಿಗೆ ಘಟನೋತ್ತರ ಮಂಜೂರಾತಿ ಕುರಿತು.

**ನಿರ್ಣಯ:** ಧಾರಣಾ ಗುತ್ತಿಗೆ ದರದಲ್ಲಿ M/s Techser Power Solutions Pvt.Ltd. Mangalore ಇವರಿಂದ ರೂ.3,00,700/– ವೆಚ್ಚದಲ್ಲಿ ವಿನಿಯಮದಡಿಯಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:15(2018)

**ವಿಷಯ:** ಕು. ಶೃತಿ ಸಿ. ಮತ್ತು ಶ್ರೀ ಗುರುಸ್ವಾಮಿ ಬಿ. ಸಂಶೋಧನಾ ವಿದ್ಯಾರ್ಥಿಗಳು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ ಇವರುಗಳಿಗೆ ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಚರ್ಚಿಸಲಾಗಿ Airfare, Registration (Actuals) ಮತ್ತು DA ರೂ.5,000/–ಕ್ಕೆ ಸೀಮಿತಗೊಳಿಸಿ ಆರ್ಥಿಕ ಸಹಾಯ ನೀಡಲು ಒಪ್ಪಲಾಯಿತು. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿಯಲ್ಲಿ ಹಣದ ಲಭ್ಯತೆಯನ್ನು ನೋಡಿ ತಲಾ ರೂ.2.0 ಲಕ್ಷಕ್ಕೆ ಸೀಮಿತಗೊಳಿಸಿ ಅನುಮೋದಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡೀಇವಿ ಸಾಸ5:16(2018)

**ವಿಷಯ:** 2017–18ನೇ ಸಾಲಿನ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರಕಟಿಸಿರುವ 12 ಪಠ್ಯ ಪುಸ್ತಕಗಳಲ್ಲಿ 08 ಪಠ್ಯ ಪುಸ್ತಕಗಳನ್ನು ಮರು ಮುದ್ರಿಸಲು ಅನುಮತಿ ಹಾಗೂ ವೆಚ್ಚಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 07.07.2017ರ ಸಿಂಡಿಕೇಟು ಸಭೆಯ ನಿರ್ಣಯದಂತೆ ಅನುಮೋದಿತ ದರದಲ್ಲಿ ಮುದ್ರಿಸಲು ಸದರಿ ಪ್ರಸ್ತಾವನೆಗೆ ಆರ್ಥಿಕ ಮಂಜೂರಾತಿ ನೀಡುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ5:17(2018)

**ವಿಷಯ:** ರಾಜ್ಯ ವೇತನ ಶ್ರೇಣಿಯ ನೌಕರರ ನಿವೃತ್ತಿ ವೇತನ ಸೌಲಭ್ಯಗಳ ಪರಿಷ್ಕರಣೆಯ ಆದೇಶಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

**ನಿರ್ಣಯ:** ಸರಕಾರಿ ನಿಯಮಾನುಸಾರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ5:18(2018)

**ವಿಷಯ:** ಡಾ. ಶಾಮಸುಂದರ್ ಜೆ., ಸಹಾಯಕ ಪ್ರಾಧ್ಯಾಪಕರು, ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿ – ಶಿಸ್ತು ಕ್ರಮಕೈಗೊಳ್ಳುವ ಕುರಿತು.

**ನಿರ್ಣಯ:** ಮುಂದಿನ ಸಭೆಗೆ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ5:19(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕಾನೂನು ಅಧ್ಯಯನ ಮತ್ತು ಸಂಶೋಧನಾ ವಿಭಾಗವನ್ನು ಮತ್ತು School of Law ಸ್ಥಾಪಿಸುವ ಹಾಗೂ ಹುದ್ದೆಗಳ ಸೃಜನೆಯ ಕರಡು ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:20(2018)

**ವಿಷಯ:** ಸ್ನಾತಕೋತ್ತರ ಸಾಗರ ಭೂವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:21(2018)

**ವಿಷಯ:** ಸಾಗರ ಭೂವಿಜ್ಞಾನ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ – ಧಾರಣಾ ಗುತ್ತಿಗೆ ದರದಲ್ಲಿ 10 KVA Online UPS ಮತ್ತು ಬ್ಯಾಟರಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 15.03.2018ರಲ್ಲಿ ಅನುಮೋದನೆಗೊಂಡ ಧಾರಣಾ ಗುತ್ತಿಗೆ ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:22(2018)

**ವಿಷಯ:** CARRT ಕೇಂದ್ರದ ಉಪಕರಣಗಳ ಬಳಕೆಗೆ ಶುಲ್ಕ ನಿಗದಿ ಮಾಡುವ ಬಗ್ಗೆ.

**ನಿರ್ಣಯ:** ಶುಲ್ಕ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:23(2018)

**ವಿಷಯ:** 2018–19ನೇ ಸಾಲಿನ ದ್ವಿತೀಯ ವರ್ಷದ ಪದವಿ ತರಗತಿಗಳಿಗೆ 8 ಕನ್ನಡ ಪಠ್ಯ ಪುಸ್ತಕಗಳನ್ನು ಮುದ್ರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 21.06.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:24(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಮತ್ತು ಪಿಹೆಚ್.ಡಿ. ಪದವಿಗಳ ಪ್ರವೇಶಾತಿಯಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಮೀಸಲಿಡುವ ಬಗ್ಗೆ.

**ನಿರ್ಣಯ:** ಇದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ (As an one time measure), ವಿಕಲಚೇತನ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಮೀಸಲಿಡುವ ಬಗ್ಗೆ ನಡೆದ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾಸ5:25(2018)

**ವಿಷಯ:** ಎಪ್ರಿಲ್/ಮೇ/ಜೂನ್ 2018ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.

**ನಿರ್ಣಯ:** ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:26(2018)

**ವಿಷಯ:** ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ – ಪ್ರಯೋಗಾಲಯಕ್ಕೆ ಅಗತ್ಯವಿರುವ ಪ್ರೊಜೆಕ್ಟರ್ ಮತ್ತು Interactive Class Room ಉಪಕರಣಗಳ ಖರೀದಿ ಬಗ್ಗೆ.

**ನಿರ್ಣಯ:** ಉಪಕರಣಗಳನ್ನು ವಿಶ್ವವಿದ್ಯಾನಿಲಯ ಧಾರಣಾಗುತ್ತಿಗೆ ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ5:27(2018)

**ವಿಷಯ:** ಡಾ. ಕೇಶವ ಮೂರ್ತಿ ಟಿ., ಉಪನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಜ್ಞಾನಕಾವೇರಿ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ತಾಯಿಯ ವೈದ್ಯಕೀಯ ವೆಚ್ಚದ ಮರುಭರಣೆ ಬಗ್ಗೆ ಹಾಗೂ ಸಂಜೀವಿನಿ ಸಹಕಾರಿ ಆಸ್ಪತ್ರೆ, ಹಾಸನ ಇದನ್ನು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಗೆ ಸೇರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಕಡ್ಡಾಯವಾಗಿ ಎಲ್ಲಾ ಸಿಬ್ಬಂದಿಗಳು ವೈದ್ಯಕೀಯ ವಿಮೆಯನ್ನು ಅಳವಡಿಸಲು ವಿಶ್ವವಿದ್ಯಾನಿಲಯ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:28(2018)

**ವಿಷಯ:** ಪರಿಶಿಷ್ಟ ಜಾತಿ / ಪಂಗಡದ ಪಿಹೆಚ್.ಡಿ. ವಿದ್ಯಾರ್ಥಿಗಳ ವ್ಯಾಸಂಗದ ಶುಲ್ಕ ಕುರಿತು.

**ನಿರ್ಣಯ:** ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆ, ದಕ್ಷಿಣ ಕನ್ನಡ ಇವರಿಂದ ಪ್ರತ್ಯುತ್ತರವನ್ನು ನಿರೀಕ್ಷಿಸಲಾಗಿ ತದನಂತರ ಕ್ರಮಕ್ಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:29(2018)

**ವಿಷಯ:** ಪರಿಶಿಷ್ಟ ಜಾತಿ / ಪಂಗಡದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಶುಲ್ಕ ಮರುಭರಣೆ ಮಾಡುವ ಬಗ್ಗೆ ಹಾಗೂ ಸದ್ರಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲಿ ಪಾವತಿಸುವ ವಿಶೇಷ ಶುಲ್ಕ ಮತ್ತು ಕಡ್ಡಾಯ ಶುಲ್ಕಗಳ ಬಗ್ಗೆ.

**ನಿರ್ಣಯ:** ಕುಟುಂಬದ ವಾರ್ಷಿಕ ವರಮಾನ 2.5ಲಕ್ಷಕ್ಕಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸರ್ಕಾರಿ ಆದೇಶದ ಪ್ರಕಾರ ಗರಿಷ್ಠ ಶುಲ್ಕ ರೂ.500/- ಕ್ಕಿಂತ ಕಡಿಮೆ ಇರುವ ಶುಲ್ಕ ಮರುಭರಣೆಗೆ ಅವಕಾಶ ಕಲ್ಪಿಸಿರುವುದರಿಂದ ಮಾಹಿತಿ ಪುಸ್ತಕ (ಪ್ರಾಸ್ಪೆಕ್ಟಸ್) 2018ರಲ್ಲಿ ಪುಟ ಸಂ.31ರಲ್ಲಿ ಪ.ಜಾ ಮತ್ತು ಪ.ಪಂ. ವಿದ್ಯಾರ್ಥಿಗಳಿಗೆ ನಮೂದಿಸಿರುವ ಒಟ್ಟು ಶುಲ್ಕ ರೂ.3,790/- ರಲ್ಲಿ ಕೇವಲ ರೂ.500/- (ರೂಪಾಯಿ ಐನೂರು ಮಾತ್ರ)ನ್ನು ಪಡೆಯುವುದು. ಉಳಿದ ಶುಲ್ಕಗಳು ವಿದ್ಯಾರ್ಥಿವೇತನದ ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನದಿಂದ ವಿಶ್ವವಿದ್ಯಾನಿಲಯದ ನಿಧಿಗೆ ಮರುಭರಣೆಯಾಗುತ್ತದೆ. ರೂ.2.50ಲಕ್ಷಕ್ಕಿಂತ ಜಾಸ್ತಿ ಇದ್ದ ವಿದ್ಯಾರ್ಥಿಗಳು ಮಾಹಿತಿ ಪುಸ್ತಕದಲ್ಲಿರುವ ಶುಲ್ಕ ಪಾವತಿಸುವುದು. ಒಂದು ವೇಳೆ ಸಮಾಜ ಕಲ್ಯಾಣ ಇಲಾಖೆ/ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ಮರುಭರಣೆ ಆಗದಿದ್ದರೆ, ಉಳಿದ ಎಲ್ಲಾ ಶುಲ್ಕಗಳನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳುವ ಷರತ್ತಿನೊಂದಿಗೆ ಪ್ರವೇಶಾತಿ ಪಡೆಯುತ್ತಿದ್ದೇನೆ ಎಂಬುದಾಗಿ ಸದರಿ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡು ಅವರಿಗೆ ಪ್ರವೇಶಾತಿಯನ್ನು ನೀಡುವುದು.

ಈ ನಿರ್ಣಯವು ಸಾಮಾನ್ಯ ವರ್ಗ (General Category) ಮತ್ತು ಭಾಗಶಃ ಸ್ವಯಂ ವಿತ್ತೀಯ (Partially Self-financing Category) ಅಡಿಯಲ್ಲಿ ಪ್ರವೇಶಾತಿ ಪಡೆಯುವ ಸದ್ರಿ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ. ಸ್ವಯಂ ವಿತ್ತೀಯ ಅಡಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ (Scholarship) ಕ್ಕೆ ಅರ್ಜಿ ಸಲ್ಲಿಸಿ ಅದರಿಂದ ಪ್ರವೇಶಾತಿ ಶುಲ್ಕ ವಿಶ್ವವಿದ್ಯಾನಿಲಯಕ್ಕೆ ಜಮಾ ಮಾಡುವುದು ಎಂದು ತೀರ್ಮಾನಿಸಲಾಯಿತು. ಒಂದು ವೇಳೆ ಸದರಿ ವಿದ್ಯಾರ್ಥಿಗೆ ವಿದ್ಯಾರ್ಥಿವೇತನ ಮಂಜೂರಾಗದ ಪಕ್ಷದಲ್ಲಿ ಎಲ್ಲಾ ಶುಲ್ಕವನ್ನು ಪಾವತಿಸುವುದಾಗಿ ಮುಚ್ಚಳಿಕೆ ಪತ್ರ ಪಡೆದುಕೊಂಡು ಪ್ರವೇಶಾತಿ ನೀಡುವುದು ಎಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:30(2018)

**ವಿಷಯ:** ಶ್ರೀ ರಮೇಶ ಮಾದರ, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಮಾನವ ಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಇವರಿಗೆ ಎಸ್‌ಸಿ/ಎಸ್‌ಟಿ ಪಿಹೆಚ್.ಡಿ. ಶಿಷ್ಯವೇತನ ನೀಡುವ ಬಗ್ಗೆ.

**ನಿರ್ಣಯ:** ನಿಯಮಾನುಸಾರ ಸದರಿ ವಿದ್ಯಾರ್ಥಿಗೆ ಮಾಸಿಕ ಶಿಷ್ಯವೇತನ ಪಾವತಿ ಹಾಗೂ ಲ್ಯಾಪ್‌ಟಾಪ್ ಹಂಚಿಕೆ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸದರಿ ವಿದ್ಯಾರ್ಥಿಯು ಯಾವುದೇ ವಿಶ್ವವಿದ್ಯಾನಿಲಯದಿಂದ ಸಹ-ಮಾರ್ಗದರ್ಶಿಯಾಗಿ ಯಾವುದೇ ಮಾರ್ಗದರ್ಶಿಯನ್ನು ಆಯ್ಕೆ ಮಾಡಬಹುದೆಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:31(2018)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಮಹಿಳಾ ಅಧ್ಯಯನ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:32(2018)

**ವಿಷಯ:** ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹವಿ ಸಾಸ5:33(2018)

**ವಿಷಯ:** 2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಅನುಮೋದನೆಯ ಬಗ್ಗೆ.

**ನಿರ್ಣಯ:** ದಿನಾಂಕ 13.07.2018 ರಂದು ನಡೆದ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:34(2018)

**ವಿಷಯ:** ಪರಿಶಿಷ್ಟ ಜಾತಿ/ಪಂಗಡದ ಘಟಕದ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನ ಮಂಜೂರಾತಿ ನಿಯಮಾವಳಿಗೆ ತಿದ್ದುಪಡಿ ಮಾಡಲು ರಚಿಸಲಾದ ಸ್ಥಾಯಿ ಸಮಿತಿಯ ಉಪಸಮಿತಿಯ ನಡಾವಳಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ5:35(2018)

**ವಿಷಯ:** ಕಾರ್ಯಕಾರಿ ಅಭಿಯಂತರರ ಕಛೇರಿಗೆ ಅಗತ್ಯವಿರುವ 3 KVA On-line with Isolation Transformer & 4 Hour Backup UPS with Battery ನ ಖರೀದಿಗೆ ಮಂಜೂರಾತಿ ಕುರಿತು.

**ನಿರ್ಣಯ:** ಧಾರಣಾ ಗುತ್ತಿಗೆ ದರದಲ್ಲಿ M/s Techser Power Solutions Pvt.Ltd., Mangalore ಇವರಿಂದ ರೂ.1,04,760/– ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:36(2018)

**ವಿಷಯ:** Drinking water purification System ನ ಅಳವಡಿಕೆಗೆ ಕುರಿತು ಬಿಲ್ಲು ಪಾವತಿ ಬಗ್ಗೆ.

**ನಿರ್ಣಯ:** ಸದರಿ ಖರೀದಿಗೆ ಸಂಬಂಧಿಸಿ 18% GST ಒಳಗೊಂಡ ರೂ.26,00,000/– ಮೊತ್ತದ ಬಿಲ್ಲಿನ್ನು ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:37(2018)

**ವಿಷಯ:** ಗಣಕಯಂತ್ರ ಕೇಂದ್ರದ Firewall ನ ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವ ಬಗ್ಗೆ.

**ನಿರ್ಣಯ:** ದಿನಾಂಕ 18.07.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:38(2018)

**ವಿಷಯ:** 2018–19ನೇ ಸಾಲಿನ ದ್ವಿತೀಯ ವರ್ಷದ ಪದವಿ ತರಗತಿಗಳಿಗೆ ಕನ್ನಡ ಪಠ್ಯ ಪುಸ್ತಕಗಳನ್ನು ಮುದ್ರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 18.07.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:39(2018)

**ವಿಷಯ:** ಸಂತ ಆಗ್ನೆಸ್ ಕಾಲೇಜು (ಸ್ವಾಯತ್ತ), ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಎಂ.ಎಸ್ಸಿ. ಸೈಕಾಲಜಿ ಕೋರ್ಸಿಗೆ ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಮಾತ್ರ ಸೀಮೀತಗೊಳಿಸಿ ಸದ್ರಿ ಕೋರ್ಸಿಗೆ 10 ಹೆಚ್ಚುವರಿ ವಿದ್ಯಾರ್ಥಿ ಪರಿಮಿತಿ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:40(2018)

**ವಿಷಯ:** ಸಂತ ಅಲೋಶಿಯಸ್ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಪ್ರಾರಂಭಿಸಲಿರುವ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಸಮಿತಿಯ ವರದಿಯ ಆಧಾರದ ಮೇಲೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:41(2018)

**ವಿಷಯ:** ಸಂತ ಅಲೋಶಿಯಸ್ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಪ್ರಾರಂಭಿಸಲಿರುವ 2 ಹೆಚ್ಚುವರಿ ವಿಭಾಗಗಳಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾಸ5:42(2018)

**ವಿಷಯ:** ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಓರ್ವ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ5:43(2018)

**ವಿಷಯ:** ಶ್ರೀ ಲವಗೌಡ, ವಾಹನ ಚಾಲಕರು ಇವರ ವೈದ್ಯಕೀಯ ಚಿಕಿತ್ಸೆಗೆ ಮುಂಗಡ ಮಂಜೂರಾತಿ ಬಗ್ಗೆ.

**ನಿರ್ಣಯ:** ಸದರಿಯವರಿಗೆ ರೂ.2,25,000/– ನ್ನು ವಿಶೇಷ ನೆಲೆಯಲ್ಲಿ ಮುಂಗಡ ಮಂಜೂರು ಮಾಡಿರುವುದನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. ವೈದ್ಯಕೀಯ ವಿಮೆಯನ್ನು ಕಡ್ಡಾಯವಾಗಿ ಅಳವಡಿಸುವ ಬಗ್ಗೆ ಡೀನರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:44(2018)

**ವಿಷಯ:** ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. ಮತ್ತು ಯು.ಜಿ.ಸಿ. ಯಿಂದ ಅನುದಾನ ಬಂದ ನಂತರ ಪ್ರಯಾಣ ಭತ್ಯೆ D.A. ಹಾಗೂ ನೋಂದಣಿ ಶುಲ್ಕ ಸೇರಿ ರೂ.60,000/– ಮೀರದಂತೆ ನೀಡಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:45(2018)

**ವಿಷಯ:** ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಮತ್ತು ಯು.ಜಿ.ಸಿ. ಯಿಂದ ಅನುದಾನ ಬಂದ ನಂತರ ಪ್ರಯಾಣ ಭತ್ಯೆ, D.A. ಹಾಗೂ ನೋಂದಣಿ ಶುಲ್ಕ ಸೇರಿ ರೂ.60,000/– ಮೀರದಂತೆ ನೀಡಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:46(2018)

**ವಿಷಯ:** ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾಸ5:47(2018)

**ವಿಷಯ:** ಕುಲಸಚಿವರ ಕಛೇರಿಯ ವಿವಿಧ ವಿಭಾಗಗಳಿಗೆ ಪ್ರಿಂಟರ್ ಖರೀದಿ ಕುರಿತು.

**ನಿರ್ಣಯ:** ದಿನಾಂಕ 18.07.2018ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾಸ5:48(2018)

**ವಿಷಯ:** ಡಾ. ನವೀನ್ ಕುಮಾರ್ ಎಸ್. ಕೆ., ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಇವರಿಗೆ ದಿನಾಂಕ 26.08.2018ರಿಂದ 30.08.2018ರ ವರೆಗೆ Yamagata University, Yenezawa, JAPAN ಇಲ್ಲಿ ನಡೆಯಲಿರುವ First International Conference ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾಸ5:49(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಹೆಸರು ಸೇರಿಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ದರ ಮತ್ತು ಇತರ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು ಶ್ರೀ ಯು.ಎಸ್.ಯೋಗೇಶ್ ಕುಮಾರ್, ಬೆಂಗಳೂರು ಮತ್ತು ಶ್ರೀ ರಂಜನ್ ಸುರೇಶ್ ಇವರುಗಳನ್ನು ನ್ಯಾಯವಾದಿಗಳ ಯಾದಿಗೆ ಸೇರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಶ್ರೀ ದಿನೇಶ್ ಹೆಗ್ಗಡೆ ಉಲೆಪಾಡಿ ಇವರನ್ನು ಸ್ಥಳೀಯ ಕಾನೂನು ಸಲಹೆಗಾರರನ್ನಾಗಿ ನೇಮಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:50(2018)

**ವಿಷಯ:** National Institute of Radiological Sciences (NRIS), National Institute for Quantum and Radiological Science and Technology, Anagawa Inage-ku, Chiba-shi, Chiba, Japan ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾಸ5:51(2018)

**ವಿಷಯ:** 2018–19ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ / ಘಟಕ ಕಾಲೇಜುಗಳಿಗೆ ರಾಸಾಯನಿಕಗಳು / ಗ್ಲಾಸ್‌ವೇರ್ / ಬಳಕೆಯ ವಸ್ತುಗಳ ಧಾರಣಾಗುತ್ತಿಗೆ ಆಧಾರದಲ್ಲಿ ಸರಬರಾಜು ಮಾಡಲು ಸಂಸ್ಥೆಗಳ ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:52(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಪನಾ ಇನ್ಸ್ಟಿಟ್ಯೂಟ್ ಆಫ್ ಅಂಡರ್ ಗ್ರಾಜ್ಯುಯೇಟ್ ಸ್ಟಡೀಸ್, ಬಜ್ಪೆ ಎಂಬ ವಿದ್ಯಾ ಸಂಸ್ಥೆಗೆ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಎವಿಯೇಷನ್ ಆಂಡ್ ಹಾಸ್ಪಿಟಾಲಿಟಿ ಮೇನೇಜೆಮೆಂಟ್ ಕೋರ್ಸ್‌ನ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಸಂಬಂಧ ಮೂಲಭೂತ ಸೌಕರ್ಯಗಳ ಲಭ್ಯತೆಗಳನ್ನು ಪರಿಶೀಲಿಸಲು ಸದರಿ ಸಂಸ್ಥೆಗೆ ಡೀನರು ಮತ್ತು ಒಬ್ಬ ಸದಸ್ಯರನ್ನೊಳಗೊಂಡ ಸಮಿತಿಯನ್ನು ಕಳುಹಿಸಿ ಸುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:53(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಸಂಯೋಜಿತ ಕಾಲೇಜುಗಳಲ್ಲಿ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:54(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಸಂಯೋಜಿತ ಕಾಲೇಜುಗಳಲ್ಲಿ ಹೆಚ್ಚುವರಿ ವಿಭಾಗಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಪನಾ ಇನ್‌ಸ್ಟಿಟ್ಯೂಟ್ ಆಫ್ ಅಂಡರ್ ಗ್ರಾಜ್ಯುಯೇಟ್ ಸ್ಟಡೀಸ್, ಕೊಳಂಬೆ, ಬಜ್ಪೆ ಬಗ್ಗೆ ಪರಿಶೀಲನಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾಸ5:55(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಡಾ. ಜಿ. ಶಂಕರ್ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಅಜ್ಜರಕಾಡು, ಉಡುಪಿ ಎಂಬ ವಿದ್ಯಾ ಸಂಸ್ಥೆಗೆ ಎಂ.ಎಸ್ಸಿ. (ರಸಾಯನಶಾಸ್ತ್ರ) ಕೋರ್ಸಿನ ಸಂಯೋಜನೆ ಬಗ್ಗೆ.

**ನಿರ್ಣಯ:** ಶೈಕ್ಷಣಿಕ ಮಂಡಳಿ ಅನುಮೋದನೆ ಕಾಯ್ದಿರಿಸಿ 2018–19ನೇ ಸಾಲಿಗೆ ಎಂ.ಎಸ್ಸಿ. (ರಸಾಯನಶಾಸ್ತ್ರ) ಕೋರ್ಸಿಗೆ 25 ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾಸ5:56(2018)

**ವಿಷಯ:** ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಸಲ್ಲಿಸಿರುವ ದೂರನ್ನು ಪರಿಶೀಲಿಸಿ ವರದಿ ಸಲ್ಲಿಸಲು ದಿನಾಂಕ 13.03.2018ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ರಚಿಸಲಾದ ಸಮಿತಿ ಸಭೆಯ ನಡಾವಳಿಯ ಬಗ್ಗೆ.

**ನಿರ್ಣಯ:** ಪರಿಶೀಲಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು